



ದಿನಾಂಕ:13-08-23 ರಂದು ಬೆಂಗಳೂರಿನ ಬಳಿ ಇರುವ ಬೇಗೂರ್ ಗ್ರಾಮದಲ್ಲಿ ಸ್ಥಾಪಿಸಿದ ಡಾ.ರಮಣ ರಾವ್ ಅವರ ನೇತೃತ್ವದ ವಿಲೇಜ್ ಕ್ಲಿನಿಕ್ಕಿನ ಗೋಲ್ಡನ್ ಜುಬ್ಲಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್.ಹೊರಟ್ಟಿ ಅವರು ಕಳೆದ 50 ವರ್ಷಗಳಿಂದ ಪ್ರತಿ ರವಿವಾರ ಡಾ. ರಮಣ್‌ರಾವ್ ಅವರು ಉಚಿತ

ವೈದ್ಯಕೀಯ ಸೇವೆಯನ್ನು ನೀಡುವ ಮೂಲಕ ಸಾವಿರಾರು ಜನರಿಗೆ ವಿಶೇಷವಾಗಿ ಬಡ ಮಧ್ಯಮ ವರ್ಗದ ಜನರಿಗೆ ಮರುಜನ್ಮವನ್ನು ನೀಡಿದ್ದಾರೆ. ಇಂತಹ ಮಹನೀಯರ ಸೇವೆ ನಾಡಿನ ಜನರಿಗೆ ಇನ್ನಷ್ಟು ಸಿಗಲಿ. "ವೈದ್ಯೋ ನಾರಾಯಣ ಹರಿ" ಎಂಬ ಮಾತು ಇವತ್ತು ನನಗೆ ನಿಜವಾಗಿಯೂ ಸತ್ಯ ಎನಿಸಿತು ಎಂದು ಹೃದಯ ತುಂಬಿ ಮನದಾಳದ ಮಾತುಗಳನ್ನು ಹೇಳಿದರು.

